ಓ.ಎಸ್. ನಂ.20/2018
ಪಿ. ಡಬ್ಲ್ಯೂ - 4

<u>ದಿನಾಂಕಃ **22-09-2025**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ.ಎ.ಕೆ.ಎಂ.ಎಸ್. ರವರಿಂದ

ನನ್ನ ಅಡ್ಡ ಹೆಸರು ಮನಿಗೆಮೊದ್ದು ಇರುತ್ತದೆ. ನಾನು ಒಕ್ಕಲುತನ ಕೆಲಸ ಮಾಡುತ್ತೇನೆ. ಕಳೆದ 7-8 ವರ್ಷಗಳಿಂದ ನಾನು ಒಕ್ಕಲುತನ ಕೆಲಸ ಮಾಡುವುದಿಲ್ಲ. ನಾನು ಗುಜರಾತ ರಾಜ್ಯದ ಸೂರತ್ ನಗರದಲ್ಲಿ ವಾಸವಾಗಿರುತ್ತೇನೆ ಅಲ್ಲಿಂದ ನಾನು ಇಲ್ಲಿಗೂ ಸಹ ಬರುತ್ತೇನೆ. ಕಳೆದ 6 ತಿಂಗಳ ಹಿಂದೆ ವಾದಿಯರು ನನಗೆ ಭೇಟಿಯಾಗಿ ಸಾಕ್ಷ್ಯ ನುಡಿಯಲು ಕೇಳಿಕೊಂಡಿದ್ದರು. ನಾನು ಶಾಲೆಯನ್ನು ಕಲಿತ್ತಿರುವುದಿಲ್ಲ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದ್ದರಿಂದ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ದುಪ್ಪಲ್ಲಿ ಗ್ರಾಮದಲ್ಲಿ ಇರುವ ನಿಮ್ಮ ಜಮೀನನ್ನು ಮಾರಾಟ ಮಾಡಿ ಸೂರತ ನಗರಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಮೊನ್ನೆ ಮೊನ್ನೆ ನನ್ನ ಜಮೀನನ್ನು ಮಾರಾಟ ಮಾಡಿರುತ್ತೇನೆ ಎಂದು ಹೇಳುತ್ತಾರೆ. ವಾದಿಯರು ಎಷ್ಟು ಜನರು ಇರುತ್ತಾರೆ ಹಾಗೂ ಅವರ ವಯಸ್ಸು ನನಗೆ ಗೊತ್ತಿರುವುದಿಲ್ಲ.

ಈ ಪ್ರಕರಣದ ಬಗ್ಗೆ ನನಗೆ ವೈಯಕ್ತಿ ಮಾಹಿತಿ ಇರುವುದಿಲ್ಲ. ವಾದಿಯರು ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸರಿ ಅವರು ನನಗೆ ಬಂದು ಸಾಕ್ಷ್ಯ ನುಡಿಯಲು ಕೋರಿಕೊಂಡ ಮೇರೆಗೆ ಸಾಕ್ಷ್ಯ ನುಡಿಯಲು ಬಂದಿರುತ್ತಾನೆ ಎಂದರೆ ಸರಿ. ಶಿವಬಸ್ಸಮ್ಮ ತಂದೆ ಬುಡ್ಡಪ್ಪ ರವರು ದುಪ್ಪಲ್ಲಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಮಾಹಿತಿಯ ಪ್ರಕಾರ ದಾವಾ ಜಮೀನುಗಳನ್ನು ಶಿವಬಸ್ಸಮ್ಮ ರವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಶಿವಬಸ್ಸಮ್ಮ ರವರು ದಾವಾದ ಆಸ್ತಿಗಳನ್ನು ಮಹಾದೇವಮ್ಮ ಮತ್ತು ಹುಸೇನಮ್ಮ ರವರ ಕಡೆಯಿಂದ 1999 ರಲ್ಲಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ನನಗೆ ಶಿವಬಸ್ಸಮ್ಮ ರವರ ಪರಿಚಯ ಇರುತ್ತದೆ.

ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ